**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ4(1)ಪ್ರೌಶಿಹೆಶಿಸ್ಥ.09/2014-15 ದಿನಾಂಕ: 04.04.2016

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011, ದಿ:01.04.2011

2. ಸರ್ಕಾರಿ ಆದೇಶ ಸಂಖ್ಯೆ: ಇಡಿ 173 ಇಟಿಆರ್ 2007, ದಿ:15.10.2007.

3. ಸರ್ಕಾರದ ಪತ್ರ ಸಂಖ್ಯೆ ಇಡಿ380 ಎಲ್‌ಬಿಪಿ 2012 ದಿನಾಂಕ:-31-12-2012

*******

ಉಲ್ಲೇಖಿತ (1)ರ ಸರ್ಕಾರಿ ಆದೇಶದ ಪ್ರಕಾರ ಪ್ರೌಢಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಸಹಶಿಕ್ಷಕರ ಹುದ್ದೆಗಳನ್ನು ಗುರುತಿಸಿ ಅಗತ್ಯವಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ವರ್ಷ ಸ್ಥಳಾಂತರಿಸಬೇಕಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರಿ ಆದೇಶದ ಕಂಡಿಕೆ 4(1)(1) ರ ಪ್ರಕಾರ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸಬೇಕಾಗಿರುವುದರಿಂದ, ಸ್ಥಳಾಂತರದಿಂದಾಗಿ ಸ್ಥಳನಿಯುಕ್ತಿಯೂ ಕೂಡ ವರ್ಗಾವಣೆಯಾಗುತ್ತದೆ ಹಾಗೂ ಸದರಿ ಉಲ್ಲೇಖ (2)ರ ಸರ್ಕಾರಿ ಆದೇಶದ ನಿಯಮ 15 ಅನ್ವಯಿಸುತ್ತದೆ. ಹೆಚ್ಚುವರಿ ಶಿಕ್ಷಕರನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಯಾವುದೇ ಹುದ್ದೆಗೆ ಸ್ಥಳಾಂತರಿಸಬಹುದಾಗಿದೆ.

1. **ಹೆಚ್ಚುವರಿ ಹುದ್ದೆ ಗುರುತಿಸುವುದು.**

➢ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಲು ಮುಂದಿನ ಹಂತವಾರು ಕ್ರಮಗಳನ್ನು ಅನುಸರಿಸುವುದು.

**ಕೋಷ್ಟಕ (ಅ)**

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ (Section) |
|---|---|---|
| 1 | 70 ಕ್ಕಿಂತ ಕಡಿಮೆ | 1 ವಿಭಾಗ |
| 2 | 71-140 | 2 ವಿಭಾಗ |
| 3 | 141-210 | 3 ವಿಭಾಗ |
| 4 | 211-280 | 4 ವಿಭಾಗ |
| 5 | 281-350 | 5 ವಿಭಾಗ |

ಅದೇ ಶಾಲೆಯಲ್ಲಿ 2 ಅಥವಾ ಹೆಚ್ಚು ಮಾಧ್ಯಮಗಳಿದ್ದಲ್ಲಿ ವಿಭಾಗಗಳನ್ನು ಮಾಧ್ಯಮವಾರು-ತರಗತಿಯ ಮಕ್ಕಳ ಸಂಖ್ಯೆ ಆಧರಿಸಿ ಗುರುತಿಸಬೇಕು.ಪ್ರತಿ ಮಾಧ್ಯಮದಲ್ಲಿ ಕನಿಷ್ಠ25 ಹಾಗೂ ಗರಿಷ್ಟ70ರ ಮಿತಿಯಲ್ಲಿರತಕ್ಕದ್ದು.

➢ 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1 1\2 ಶಿಕ್ಷಕರಂತೆ ಅವಕಾಶವಿದೆ.

➢ ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕಿಂತ ಹೆಚ್ಚಾಗಿರುವ ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕ ಹುದ್ದೆಗಳೆಂದು ಗುರುತಿಸುವುದು. (ಸ್ತರ ವಿನ್ಯಾಸಕ್ಕೆ ಉಲ್ಲೇಖಿತ-1 ರ ಸರ್ಕಾರದ ಆದೇಶ ಗಮನಿಸತಕ್ಕದ್ದು)

➢ ಹೆಚ್ಚುವರಿ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳಲ್ಲಿ ಯಾರು ಆ ಶಾಲೆಯ ಸಂಬಂದಿಸಿದ ವಿಷಯದ ಹುದ್ದೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸಿರುತ್ತಾರೋ ಅವರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.

**ಟಿಪ್ಪಣಿ:**

➢ ಮೇಲ್ಕಂಡ ಸ್ತರ ವಿನ್ಯಾಸದ ಶಿಕ್ಷಕರ ಜೊತೆಗೆ ಸಂಸ್ಕೃತ, ಉರ್ದು, ತೆಲುಗು, ತಮಿಳು, ಮರಾಠಿ, ಶಿಕ್ಷಕರನ್ನು ಹಾಗೂ ಭಾಷಾ ಅಲ್ಪಸಂಖ್ಯಾತ ಮಾಧ್ಯಮವಿರುವ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಿದ್ದಲ್ಲಿ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸುವಂತಿಲ್ಲ.

➢ ಕೆಲವು ಶಾಲೆಗಳಲ್ಲಿ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಗಳು ಮಂಜೂರಾಗಿಲ್ಲ. ಇಂತಹ ಶಾಲೆಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 326 ಎಲ್.ಬಿ.ಪಿ 2010, ದಿ: 04.12.2010 ರ ಪ್ರಕಾರ ಒಂದಕ್ಕಿಂತ ಹೆಚ್ಚಿನ ಕಲಾ ಶಿಕ್ಷಕರಿದ್ದಲ್ಲಿ ಈ ಕಲಾ ಶಿಕ್ಷಕರ ಹುದ್ದೆಯನ್ನು ಮಾತ್ರ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸುವುದು ಹಾಗೂ ಸದರಿ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಬಾರದು.

- ಒಂದು ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-1 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-2 ಎರಡೂ ಹುದ್ದೆಗಳಿದ್ದು, ಒಂದು ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಹೆಚ್ಚುವರಿಯಾಗಿದ್ದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-1 ಹುದ್ದೆಯನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.
- ಡಾ॥ವೈದ್ಯನಾಥನ್ ಸಮಿತಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವಂತಿಲ್ಲ. ಇಂತಹ ಶಾಲೆಗಳಲ್ಲಿ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಸೇವೆಯಲ್ಲಿ ಮುಂದುವರೆಯಬೇಕು.
- ಪ್ರೌಢಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರುಗಳಿದ್ದಲ್ಲಿ (ವೃತ್ತಿ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ) ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಉಳಿಸಿಕೊಂಡು, ಉಳಿದ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಉಲ್ಲೇಖ-3 ರ ಸರ್ಕಾರದ ಪತ್ರದಲ್ಲಿ ಸರ್ಕಾರಿ **ಹೆಣ್ಣು ಮಕ್ಕಳ ಪ್ರೌಢ ಶಾಲೆಗಳಲ್ಲಿರುವ** ಸಂಗೀತ ಶಿಕ್ಷಕರ ಹುದ್ದೆಗಳನ್ನು ಸಂಗೀತ ಕಲಿಯುತ್ತಿರುವ ಮಕ್ಕಳ ಹಿತದೃಷ್ಟಿಯಿಂದ ಹೆಚ್ಚುವರಿಯೆಂದು ಪರಿಗಣಿಸದೇ ಆಯಾ ಶಾಲೆಗಳಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ತಿಳಿಸಿದ್ದು, ಅದರಂತೆ ಕ್ರಮ ಕೈಗೊಳ್ಳುವುದು.

**ವಿನಾಯಿತಿ:-**

ಹೆಚ್ಚುವರಿ ಶಿಕ್ಷಕರನ್ನು ಆಯಾ ಶಾಲೆಯಲ್ಲಿ ಗುರುತಿಸುವ ಸಮಯದಲ್ಲಿ ಈ ಕೆಳಕಂಡ ಶಿಕ್ಷಕರಿಗೆ ವಿನಾಯಿತಿ ನೀಡಲಾಗಿದೆ. ವಿನಾಯಿತಿಯನ್ನು ಕೆಳಗಿನಂತೆ ಅನುಕ್ರಮವಾಗಿ ನೀಡುವುದು. ಆದರೆ ಒಂದು ವಿಷಯದ ಎಲ್ಲಾ ಶಿಕ್ಷಕರು ವಿನಾಯಿತಿ ಪಟ್ಟಿಗೆ ಬಂದಲ್ಲಿ ವಿನಾಯಿತಿಯನ್ನು ಮುಂದಿನ ಅನುಕ್ರಮಣಿಕೆಯಲ್ಲಿ ನೀಡಿ ಉಳಿದ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಬೇಕು. ಒಂದು ವಿಷಯದಲ್ಲಿ ಹೆಚ್ಚುವರಿ ಶಿಕ್ಷಕರು ಮುಂದಿನ ಒಂದೇ ಗುಂಪಿನಲ್ಲಿ ಬಂದಲ್ಲಿ ಅವರಲ್ಲಿ ಹಿರಿಯ ಶಿಕ್ಷಕರು ಹೆಚ್ಚುವರಿಯಾಗುತ್ತಾರೆ.

- ಶೇಕಡಾ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಶಿಕ್ಷಕರು (ವರ್ಗಾವಣಾ ನಿಯಂತ್ರಣ ಕಾಯ್ದೆಯಲ್ಲಿ ತಿಳಿಯಪಡಿಸಿದಂತೆ ತ್ರಿಸದಸ್ಯ ವೈದ್ಯಕೀಯ ಸಮಿತಿಯ ದೃಢೀಕರಣ ಹೊಂದಿರತಕ್ಕದ್ದು)
- ಮಾಜಿ ಸೈನಿಕರ ಪತ್ನಿಯಾಗಿರುವ ಶಿಕ್ಷಕರು. (ನಿಯಮದಂತೆ ಅವಶ್ಯ ಪ್ರಮಾಣ ಪತ್ರಹಾಜರುಪಡಿಸತಕ್ಕದ್ದು)
- ವಿಧವಾ ಶಿಕ್ಷಕರು.( ಮರಣ ಪ್ರಮಾಣ ಪತ್ರ/ ಇತರೆ ಸಕ್ಷಮ ಪ್ರಾಧಿಕಾರಿಯು ನೀಡಿರುವ ಪ್ರಮಾಣ ಪತ್ರ)
- ತೀವ್ರತರ ಖಾಯಿಲೆ ಇರುವ ಶಿಕ್ಷಕರು (ವರ್ಗಾವಣಾ ನಿಯಂತ್ರಣ ಕಾಯ್ದೆಯಲ್ಲಿ ತಿಳಿಯಪಡಿಸಿದಂತೆ ತ್ರಿಸದಸ್ಯ ವೈದ್ಯಕೀಯ ಸಮಿತಿಯ ದೃಢೀಕರಣ ಹೊಂದಿರತಕ್ಕದ್ದು)
- 31.03.2016 ರಿಂದ ಮುಂದಿನ 2 ವರ್ಷಗಳಲ್ಲಿ ನಿವೃತ್ತರಾಗಲಿರುವ ಶಿಕ್ಷಕರು
- ಸರ್ಕಾರದಿಂದ ಮಾನ್ಯತೆ ಪಡೆದ ಪ್ರೌಢಶಾಲಾ ಶಿಕ್ಷಕರ ಸಂಘದ ಚುನಾಯಿತ ಪದಾಧಿಕಾರಿಗಳಾದ ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು, ಉಪಾಧ್ಯಾಕ್ಷರು, ಖಜಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ – (ಒಟ್ಟಾರೆ ಸೇವಾವಧಿಯಲ್ಲಿ ಎರಡು ಅವಧಿಗೆ ಮಾತ್ರ ಸೀಮಿತಗೊಂಡಂತೆ )
- ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾಗಿದ್ದಲ್ಲಿ ಡಿಪಿಎಆರ್‌ನಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಪ್ರಕಾರ ವಿನಾಯಿತಿಯಿರುವ ಶಿಕ್ಷಕರು.

## 2. ಹೆಚ್ಚುವರಿ ಹುದ್ದೆ ಸ್ಥಳಾಂತರಿಸುವ ಕ್ರಮ:

- ಫೆಬ್ರುವರಿ 2016ರ ಹಾಜರಾತಿಯನ್ನು ಇತರೆ ಎಲ್ಲಾ ಮೂಲಗಳಾದ ಡೈಸ್‌ಮಾಹಿತಿ/ ಬುಕ್ಸ್.ಸಮವಸ್ತ್ರ/ಮದ್ಯಾಹ್ನ ಉಪಹಾರಯೋಜನೆ ಫಲಾನುಭವಿ ಮಕ್ಕಳು ಇವುಗಳ ದಾಖಲಾತಿಗಳನ್ನು ಅವಶ್ಯವೆಂದು ಕಂಡುಬಂದಲ್ಲಿ ಖಚಿತಪಡಿಕೊಂಡು (ಯಾವುದೇ ಲೋಪದೋಷಗಳಿಗೆ ಆಸ್ಪದನೀಡದಂತೆ) ಹೆಚ್ಚುವರಿ ಖಾಲಿ ಹುದ್ದೆ/ ಶಿಕ್ಷಕರರಿರುವ ಶಾಲೆಗಳ ಪಟ್ಟಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಯವರು ತಯಾರಿಸಿ ಉಪನಿರ್ದೇಶಕರುಗಳಿಗೆ ಕಳುಹಿಸಬೇಕು. ನೀಡುವ ಯಾವುದೇ ಮಾಹಿತಿಗಳು ದೋಷಪೂರಿತವಾದಲ್ಲಿ ಸಂಬಂದಿಸಿದ ಪ್ರೌಢಶಾಲಾ ಮುಖ್ಯಶಿಕ್ಷಕರು/ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರ ಕಛೇರಿ ನೋಡಲ್ ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರ ಮೇಲೆ ದೂರುಗಳು ಬಂದಲ್ಲಿ ಶಿಸ್ತುಕ್ರಮಕ್ಕೆ ಕ್ರಮವಹಿಸಲಾಗುವುದು. ಕ್ಷೇತ್ರಶಿಕ್ಷಣಾಧಿಕಾರಿಗಳು ಸಲ್ಲಿಸುವ ಮಾಹಿತಿಯು ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು ಉಪನಿರ್ದೇಶಕರು ಪ್ರಕಟಿಸುವುದು.
- ಹೆಚ್ಚುವರಿಯಾಗುವ ಖಾಲಿ ಹುದ್ದೆಗಳನ್ನು ಬೇಡಿಕೆ ಅನುಸಾರ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಹೆಚ್ಚುವರಿಯಾಗಿರುವ ಖಾಲಿ ಹುದ್ದೆ ಮತ್ತು ಅಗತ್ಯವಿರುವ ಹುದ್ದೆಗಳ ವಿಷಯಗಳು ಹೊಂದಾಣಿಕೆ ಆಗದಿದ್ದಾಗ ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 109 ರಂತೆ ಹುದ್ದೆ ಪರಿವರ್ತನೆಗೆ ಕರ್ನಾಟಕ ಆರ್ಥಿಕ ಸಂಹಿತೆ ಪ್ರಪತ್ರ 23

ರಂತೆ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸಬೇಕು ಅಗತ್ಯ ವಿಷಯಗಳಲ್ಲಿ ಇಂಗ್ಲೀಷ್ ಕೂಡಾ ಇದ್ದರೆ ಈ ವಿಷಯಕ್ಕೂ ಪ್ರಸ್ತಾವನೆ ಕಳುಹಿಸಬಹುದು.

- ಶಿಕ್ಷಕರಿಂದ ಆಕ್ಷೇಪಣೆ ಸ್ವೀಕರಿಸಿದ ನಂತರ ಲೋಪದೋಷಗಳಿದ್ದಲ್ಲಿ ಖಚಿತಪಡಿಸಿಕೊಂಡು ಹಾಗೂ ಸರಿಪಡಿಸಿಕೊಂಡು ಅಂತಿಮವಾಗಿ ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು.
- ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಮೊದಲಿಗೆ ಸ್ಥಳಾಂತರಿಸುವುದು. ಮತ್ತು ದಿನಾಂಕ: 30-03-2016 ರಂದು ಖಾಲಿಯಿರುವ (ಸ್ಥಳಾಂತರಗೊಂಡಿರುವ ಹುದ್ದೆಗಳು ಸೇರಿದಂತೆ) ಹುದ್ದೆಗಳನ್ನು ಪ್ರಕಟಿಸುವುದು. ಅಗತ್ಯತೆಯನ್ನು ತಿಳಿಯಲು 29-02-2015ರ ವಿದ್ಯಾರ್ಥಿಗಳ ಸರಾಸರಿ ಹಾಜರಾತಿಯೇ ಆಧಾರವಾಗಿರತಕ್ಕದ್ದು.

**3.ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಕ್ರಮ:**

- ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಆದ್ಯತಾಪಟ್ಟಿ ಸಿದ್ಧಪಡಿಸುವುದು.
- ಹೆಚ್ಚುವರಿ ಶಿಕ್ಷಕರ ಆದ್ಯತಾಪಟ್ಟಿ ಸಿದ್ಧಪಡಿಸುವಾಗ ಒಟ್ಟು ವರ್ಗಾವಣಾ ನಿಯಂತ್ರಣ ಕಾಯ್ದೆಯನ್ವಯದಂತೆ ಎ/ಬಿ/ಸಿ ವಲಯಗಳನ್ನು ಪರಿಶೀಲಿಸಿ ಕೃಪಾಂಕ ನೀಡತಕ್ಕದ್ದು ( ಪೂರ್ಣಗೊಂಡ ಸೇವೆ) ಸೇವಾ ಜೇಷ್ಠತೆಯನ್ನು ಪರಿಗಣಿಸಿ, ಕೆಳಗಿನಂತೆ ಆದ್ಯತೆ ನಿಗದಿಪಡಿಸುವುದು.
    - ಎ) ವಿನಾಯಿತಿ ಪಟ್ಟಿಯಲ್ಲಿದ್ದರೂ ಸಹ ಸ್ಥಳಾಂತರಿಸಬೇಕಾದ ಶಿಕ್ಷಕರು.
    - ಬಿ) ಪತಿ-ಪತ್ನಿ ಪ್ರಕರಣಗಳಲ್ಲಿ ಮಹಿಳಾ ಶಿಕ್ಷಕರು. (ಅದೇ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರಬೇಕು)
    - ಸಿ) ಪತಿ-ಪತ್ನಿ ಪ್ರಕರಣಗಳಲ್ಲಿ ಪುರುಷ ಶಿಕ್ಷಕರು. . (ಅದೇ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರಬೇಕು)
    - ಡಿ) ಇತರೆ ಮಹಿಳಾ ಶಿಕ್ಷಕರು.
    - ಇ) ಇತರೆ ಪುರುಷ ಶಿಕ್ಷಕರು.
- ಆದ್ಯತಾ ಪಟ್ಟಿಗೆ ಶಿಕ್ಷಕರು ಆಕ್ಷೇಪಣೆ ನೀಡಲು ಐದು(05) ದಿನ ಕಾಲಾವಕಾಶ ನೀಡುವುದು.
- ಆಕ್ಷೇಪಣೆಯನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವುದು.
- **ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಮರುಹಂಚಿಕೆ ಮಾಡುವುದು.**
- **2014-15 ರ ನೇಮಕಾತಿಗೆ ನೀಡಿದ ಹುದ್ದೆಗಳನ್ನು ಸಿ ವಲಯದಲ್ಲಿ ಕಾಯ್ದರಿಸಿಕೊಳ್ಳುವುದು. ಆದರ್ಶ ಶಾಲೆ ಮತ್ತು ಆರ್.ಎಂ.ಎಸ್.ಎ ಅಡಿ ಉನ್ನತೀಕರಿಸಿದ ಪ್ರೌಢಶಾಲೆಗಳ ಖಾಲಿ ಹುದ್ದೆಗಳನ್ನು ಈ ಪ್ರಕ್ರಿಯೆಯಿಂದ ತುಂಬಬಾರದು.**

ನಮೂನೆ-1 ರಲ್ಲಿ ನೀಡಿರುವ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದಂತೆ, ಸ್ಥಳಾಂತರ ಪ್ರಕ್ರಿಯೆ ಪೂರ್ಣಗೊಳಿಸಿ, ನಮೂನೆ-2 ರ ಪ್ರಕಾರ ಮಾಹಿತಿ ಭರ್ತಿ ಮಾಡಿ ದಿನಾಂಕ: 15.05.2016 ರಂದು ಇ.ಮೇಲ್ ಮೂಲಕ ಸಂಬಂಧಿಸಿದ ಆಯುಕ್ತಾಲಯಗಳ ನಿರ್ದೇಶಕರಿಗೆ ಹಾಗೂ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು, ಇವರಿಗೆ ಕಳುಹಿಸತಕ್ಕದ್ದು. ಅಪರ ಆಯುಕ್ತರು ಕಲಬುರ್ಗಿ ಮತ್ತು ಧಾರವಾಡ ಆಯುಕ್ತಾಲಯದವರು ಸಹ ಸದರಿ ಯೋಜನೆ ಬಗ್ಗೆ ಅಥವಾ ಕಾರ್ಯಕ್ರಮದ ಬಗ್ಗೆ ಮೇಲುಸ್ತುವಾರಿ ವಹಿಸಿ ಜಿಲ್ಲಾವಾರು ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

**ನಿರ್ದೇಶಕರು(ಪ್ರೌಢಶಿಕ್ಷಣ)**

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಿಕ್ಷಣ ವಾರ್ತೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ ಇವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
5. ನಿರ್ದೇಶಕರು, ಆರ್.ಎಂ.ಎಸ್.ಎ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
6. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
7. ಸಹನಿರ್ದೇಶಕರು (ಗುಣಮಟ್ಟ) ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
8. ಕಛೇರಿ ಪ್ರತಿ.

# ಸರ್ಕಾರಿ ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರ ಮಾಹಿತಿ

## ಅನುಬಂಧ–1

| ಕ್ರ ಸಂ | ಜಿಲ್ಲೆಯ ಹೆಸರು | ಹೆಚ್ಚುವರಿ ಎಂದು ಗುರುತಿಸಿದ ಹೆಚ್ಚುವರಿ ಶಿಕ್ಷಕರ ಸಂಖ್ಯೆ | | | | | | | | | ಸ್ಥಳಾಂತರಿಸಿದ ಹೆಚ್ಚುವರಿ ಶಿಕ್ಷಕರ ಸಂಖ್ಯೆ | | | | | | | | | ಹೆಚ್ಚುವರಿಯಾಗಿದ್ದು ಸ್ಥಳಾಂತರಿಸಲಾಗದ ಹೆಚ್ಚುವರಿ ಶಿಕ್ಷಕರ ಸಂಖ್ಯೆ | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು |
| | | | | | | | | | | | | | | | | | | | | | | | | | | | | |

## ಅನುಬಂಧ–2

| ಕ್ರ ಸಂ | ಜಿಲ್ಲೆಯ ಹೆಸರು | ಹೆಚ್ಚುವರಿ ಎಂದು ಗುರುತಿಸಿದ ಖಾಲಿ ಹುದ್ದೆಗಳ ಸಂಖ್ಯೆ | | | | | | | | | ಸ್ಥಳಾಂತರಿಸಿದ ಹೆಚ್ಚುವರಿ ಖಾಲಿಹುದ್ದೆಗಳ ಸಂಖ್ಯೆ | | | | | | | | | ಹೆಚ್ಚುವರಿಯಾಗಿದ್ದು ಸ್ಥಳಾಂತರಿಸಲಾಗದ ಹೆಚ್ಚುವರಿ ಖಾಲಿಹುದ್ದೆಗಳ ಸಂಖ್ಯೆ | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು | ಎಲ್ 1 | ಎಲ್ 2 | ಎಲ್ 3 | ಪಿಸಿಎಂ | ಸಿಬಿಜಡ್ | ಕಲಾ | ದೈ ಶಿ | ವಿಶೇಷ ಶಿಕ್ಷಕರು | ಒಟ್ಟು |
| | | | | | | | | | | | | | | | | | | | | | | | | | | | | |

ಉಪನಿರ್ದೇಶಕರು (ಆಡಳಿತ)

_______________ಜಿಲ್ಲೆ

\\10.96.135.22\e\E\EST4\hechhuvari shikshakaru.docx

# <u>ನಮೂನೆ - I</u>

## ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಹೆಚ್ಚುವರಿ ಖಾಲಿ/ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸುವ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ.ಸಂ | ವಿಷಯ | ದಿನಾಂಕ | ಕ್ರಮ |
|---|---|---|---|
| 1 | ಫೆಬ್ರುವರಿ 2016 ರ ದಾಖಲಾತಿ/ಹಾಜರಾತಿಯಂತೆ ಹೆಚ್ಚುವರಿ ಶಿಕ್ಷಕರ ಹುದ್ದೆ ಶಿಕ್ಷಕರ ಹುದ್ದೆಗಳ ಅಗತ್ಯವಿರುವ ಇರುವ ಶಾಲೆಗಳನ್ನು ಗುರುತಿಸುವುದು | 05.04.2016 ರಿಂದ 11.04.2016 | ಕ್ಷೇತ್ರ ಶಿಕ್ಷಣಾಧಿಕಾರಿ |
| 2 | ಫೆಬ್ರುವರಿ 2016 ರ ದಾಖಲಾತಿಯಂತೆ ಹೆಚ್ಚುವರಿ ಹುದ್ದೆ/ಶಿಕ್ಷಕರ ಅಗತ್ಯವಿರುವ ಶಾಲೆಗಳನ್ನು ಗುರುತಿಸಿ ಗಣಕಯಂತ್ರದಲ್ಲಿ ಡಾಟಾ ಎಂಟ್ರಿ ಮಾಡಿ ವ್ಯಾಲಿಡೇಷನ್ ಪೂರ್ಣಗೊಳಿಸುವುದು. ಮತ್ತು ಉ.ನಿ ಕಛೇರಿಗೆ ಸಲಿಸುವುದು. | | |
| 3 | ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರ ಪಟ್ಟಿ/ಅವಶ್ಯವಿರುವ ಹುದ್ದೆಗಳ ಪಟ್ಟಿ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಯಲ್ಲಿ ಅನುಮೋದಿಸುವುದು. | 12.04.2016 | ಉಪನಿರ್ದೇಶಕರಿಂದ ಅನುಮೋದನೆ |
| 4 | ಹೆಚ್ಚುವರಿ ಇರುವ ಖಾಲಿ ಹುದ್ದೆಗಳ ಪ್ರಕಟಣೆ/ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇರುವ ಶಾಲೆಗಳ ಪಟ್ಟಿ ಪ್ರಕಟಣೆ | 15.04.2016 | ಆಯಾ ಬಿ.ಇ.ಓ/ ಉಪನಿದೇಶಕರು |
| 5 | ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಣೆ | 21.04.2016 | ಆಯಾ ಬಿ.ಇ.ಓ/ ಉಪನಿದೇಶಕರು |
| 6 | ಸಂಬಂಧಿಸಿದ ಶಿಕ್ಷಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕ | 23.04.2016 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ |
| 7 | ಆಕ್ಷೇಪಣೆಗಳ ಪರಿಶೀಲನೆ | 26.04.2016 | ಬಿ.ಇ.ಓ/ ಉಪನಿರ್ದೇಶಕರು |
| 8 | ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿಯ ಪ್ರಕಟಣೆ | 28.04.2016 | ಬಿ.ಇ.ಓ/ ಉಪನಿರ್ದೇಶಕರು |
| 9 | ಹೆಚ್ಚುವರಿ ಖಾಲಿ ಹುದ್ದೆಗಳ ಸ್ಥಳಾಂತರ | 29.04.2016 | ಉಪನಿರ್ದೇಶಕರು (ಆ) |
| 10 | ಹೆಚ್ಚುವರಿ ಶಿಕ್ಷಕರಿಗೆ ಕೌನ್ಸಿಲಿಂಗ್ ನಡೆಸುವುದು ಆದೇಶ ನೀಡುವುದು. ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮಾಡಿ ಆದೇಶ ಹೊರಡಿಸುವುದು. | 02.05.2016 ರಿಂದ 03.05.2016 | ಜಿಲ್ಲಾ ಮಟ್ಟದಲ್ಲಿ |
| 11 | ಅಂತಿಮವಾಗಿ ಆಯುಕ್ತರ ಕಚೇರಿಗೆ ವರದಿ ಮಾಡುವುದು. | 15.05.2016 | ಉಪನಿರ್ದೇಶಕರು |